ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014–15 ದಿನಾಂಕ: 14–7–2015

# ಪತ್ರಿಕಾ ಪ್ರಕಟಣೆ

**ವಿಧಾನ ಮಂಡಲದಲ್ಲಿ ಇಂದು:**

## ನ್ಯಾಯಾಲಯಗಳಲ್ಲಿ 12.50 ಲಕ್ಷ ಪ್ರಕರಣಗಳು ಬಾಕಿ

**ಬೆಂಗಳೂರು, ಜುಲೈ 14 (ಕರ್ನಾಟಕ ವಾರ್ತೆ)**

ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ಜುಲೈ 1ನೇ ತಾರೀಖಿನವರೆಗೆ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳು ಸೇರಿದಂತೆ 12,50,715 ಪ್ರಕರಣಗಳು ಬಾಕಿ ಇವೆ ಎಂದು ರಾಜ್ಯ ಕಾನೂನು ಸಂಸದೀಯ ವ್ಯವಹಾರಗಳ ಸಚಿವ ಟಿ.ಬಿ. ಜಯಚಂದ್ರ ಅವರು ಇಂದು ವಿಧಾನಸಭೆಯಲ್ಲಿ ಮೂಡಿಗೆರೆ ಶಾಸಕ ಬಿ.ಬಿ. ನಿಂಗಯ್ಯ ಅವರ ಲಿಖಿತ ಪ್ರಶ್ನೆಗೆ ಉತ್ತರಿಸುತ್ತಾ ತಿಳಿಸಿದರು.

ಇತ್ತೀಚಿನ ವರ್ಷಗಳಲ್ಲಿ ಹೆಚ್ಚಿನ ಪ್ರಕರಣಗಳು ವಿವಿಧ ನ್ಯಾಯಾಲಯಗಳಲ್ಲಿ ದಾಖಲಾಗುತ್ತಿದ್ದು, ಇದರಿಂದಾಗಿ ಬಾಕಿ ಪ್ರಕರಣ ಸಂಖ್ಯೆ ಹೆಚ್ಚುತ್ತಿದೆ. ಅಧೀನ ನ್ಯಾಯಾಲಯಗಳಲ್ಲಿ 286 ನ್ಯಾಯಾಂಗ ಅಧಿಕಾರಿಗಳ ಹುದ್ದೆ ಖಾಲಿ ಇದೆ. ಖಾಲಿಯಿರುವ ನ್ಯಾಯಾಧೀಶರುಗಳ ಹುದ್ದೆಯನ್ನು ಬಡ್ತಿ ಮೂಲಕ ಹಾಗೂ ನೇರ ನೇಮಕಾತಿ ಮೂಲಕ ತುಂಬುವ ಪ್ರಕ್ರಿಯೆಯನ್ನು ರಾಜ್ಯ ಉಚ್ಛ ನ್ಯಾಯಾಲಯವು ಪ್ರಾರಂಭಿಸಿದೆ. ಶೀಘ್ರದಲ್ಲಿಯೇ ಈ ಹುದ್ದೆಗಳನ್ನು ಭರ್ತಿಮಾಡಲಾಗುವುದು ಎಂದು ಸಚಿವರು ಲಿಖಿತ ಉತ್ತರದಲ್ಲಿ ತಿಳಿಸಿದರು.

ಬಾಬು:ಜಿಪಿಆರ್.

## ರಾಜ್ಯದಲ್ಲಿ 2.22 ಲಕ್ಷ ಹುದ್ದೆ ಖಾಲಿ

**ಬೆಂಗಳೂರು, ಜುಲೈ 14 (ಕರ್ನಾಟಕ ವಾರ್ತೆ)**

ರಾಜ್ಯದಲ್ಲಿ ವಿವಿಧ ಇಲಾಖೆಗಳಲ್ಲಿ ನಿವೃತ್ತಿ ಮತ್ತು ಮತ್ತಿತರ ಕಾರಣಗಳಿಂದ 2,22,286 ವಿವಿಧ ವರ್ಗದ ಹುದ್ದೆಗಳು ಖಾಲಿ ಇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸಭೆಯಲ್ಲಿ ಇಂದು ಶಾಂತಿನಗರದ ಶಾಸಕ ಎನ್.ಎನ್. ಹ್ಯಾರಿಸ್ ಅವರ ಲಿಖಿತ ರೂಪದ ಪ್ರಶ್ನೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ರಾಜ್ಯದಲ್ಲಿ 70,568 ಅಧಿಕಾರಿ ಹುದ್ದೆಗಳು ಮತ್ತು 6,80,866 ಸಿಬ್ಬಂದಿ ಹುದ್ದೆಗಳು ಮಂಜೂರಾಗಿದೆ. ಇದರಲ್ಲಿ 18,304 ಅಧಿಕಾರಿ ಹುದ್ದೆಗಳು ಮತ್ತು 2,03,982 ಸಿಬ್ಬಂದಿ ಹುದ್ದೆಗಳು ಖಾಲಿ ಇವೆ.

ಖಾಲಿಯಿರುವ ಹುದ್ದೆಗಳನ್ನು ತುಂಬಲು ಇಲಾಖಾ ಮುಖ್ಯಸ್ಥರು ಸಚಿವಾಲಯದ ಆಡಳಿತ ಇಲಾಖೆಗಳಿಗೆ ಪ್ರಸ್ತಾವನೆ ಸಲ್ಲಿಸಿ, ಆಡಳಿತ ಇಲಾಖೆಗಳು ಆರ್ಥಿಕ ಇಲಾಖೆ ಸಹಮತಿ ಪಡೆದು ಖಾಲಿ ಹುದ್ದೆಗಳನ್ನು ತುಂಬಾ ಬೇಕಾಗುತ್ತದೆ. ಆದರೆ ಅನುಚ್ಛೇಧ 371 (ಜೆ) ರಡಿ ಸ್ಥಳೀಯ ವೃಂದದ ಖಾಲಿ ಹುದ್ದೆಗಳನ್ನು ತುಂಬಲು ಮಿತವ್ಯಯ ಆದೇಶ ಅನ್ವಯವಾಗುದಿಲ್ಲ. ಇದಕ್ಕೆ ಆರ್ಥಿಕ ಇಲಾಖೆಯು ಸಹಮತಿ ನೀಡಿದೆ ಎಂದು ಭಾವಿಸಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಮುಖ್ಯಮಂತ್ರಿಯವರು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಖಾಲಿ ಹುದ್ದೆಗಳನ್ನು ತುಂಬಲು ಅನುಮತಿ ಪಡೆದ ನಂತರ ಇಲಾಖೆಗಳು ಆ ಖಾಲಿ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗ ಹಾಗೂ ಇತರೆ ಆಯ್ಕೆ ಪ್ರಾಧಿಕಾರಗಳಿಗೆ ಬಿಡುಗಡೆ ಮಾಡುತ್ತಿವೆ. ಆಯಕಟ್ಟಿನ ಹುದ್ದೆಗಳಲ್ಲಿ ಆತಳಿತಾತ್ಮಕ ತೊಂದರೆಗಳ ನಿವಾರಣೆಗಾಗಿ ಪ್ರಭಾರಿ ವ್ಯವಸ್ಥೆಗಳನ್ನು ಮಾಡಿ ಕೆಲಸ ಕುಂಠಿತವಾಗದಂತೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಮುಖ್ಯಮಂತ್ರಿಗಳು ತಮ್ಮ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಬಾಬು:ಜಿಪಿಆರ್.

# ಬೆಂಗಳೂರಿನಲ್ಲಿ ಕಳೆದ ಆರು ತಿಂಗಳಲ್ಲಿ 186 ಸರ ಕಳವು ಪ್ರಕರಣ

**ಬೆಂಗಳೂರು, ಜುಲೈ 14 (ಕರ್ನಾಟಕ ವಾರ್ತೆ)**

ಬೆಂಗಳೂರು ನಗರದಲ್ಲಿ ಸರಗಳ್ಳತನ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು ಕಳೆದ ಆರು ತಿಂಗಳಲ್ಲಿ 186 ಸರ ಕಳವು ಪ್ರಕರಣ ನಡೆದಿರುವುದು ವರದಿಯಾಗಿದೆ ಎಂದು ಗೃಹ ಸಚಿವ ಕೆ.ಜೆ. ಜಾರ್ಜ್ ಅವರು ವಿಧಾನಸಭೆಯಲ್ಲಿ ಇಂದು ಪದ್ಮನಾಭನಗರ ಶಾಸಕ ಆರ್. ಅಶೋಕ್ ಅವರ ಪ್ರಶ್ನೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಸರಗಳ್ಳತನ ಪ್ರಕರಣಗಳನ್ನು ತಡೆಗಟ್ಟಲು ಹಾಗೂ ಸರಗಳ್ಳರನ್ನು ಬಂಧಿಸಲು ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಹಲವು ಕ್ರಮಗಳನ್ನು ಕೈಗೊಂಡಿದೆ. ಸರಗಳ್ಳತನ ತಡೆಗಟ್ಟುವ ಸಲುವಾಗಿ ಠಾಣ ಸರಹದ್ದುಗಳಲ್ಲಿ “ಚೈನ್ ಸ್ನ್ಯಾಚರ್ಸ್ ಸ್ಪೆಶಲ್ ಡ್ರೈವ್” ಎಂಬ ವಿಶೇಷ ಕಾರ್ಯವನ್ನು ಜಾರಿಗೆ ತಂದಿದ್ದು ಆಯಾ ಕಟ್ಟಿನ ಪ್ರದೇಶಗಳನ್ನು ಗುರುತಿಸಿ ಪ್ರತಿದಿನ ಹಗಲು ಮತ್ತು ರಾತ್ರಿ ಸಮಯದಲ್ಲಿ ವಾಹನ ತಪಾಸಣೆ ಮಾಡಲಾಗುತ್ತಿದೆ. ಬೆಳಗಿನ ಸಮಯದಲ್ಲಿ ಸರ ಅಪಹರಣಗಳು ಜರುಗದಂತೆ ನೋಡಿಕೊಳ್ಳಲು ಬೀಟ್ ಅಧಿಕಾರಿ ಮತ್ತು ಸಿಬ್ಬಂದಿಗಳಿಂದ ಗುಡ್ ಮಾರ್ನಿಂಗ್ ಬೀಟ್ ಕರ್ತವ್ಯ ನಿರ್ವಹಿಸಲಾಗುತ್ತಿದೆ. ಹೊಯ್ಸಳ ಮತ್ತು ಚೀತಾ ವಾಹನಗಳ ಗಸ್ತು ಕರ್ತವ್ಯ ಸಹ ನಿರ್ವಹಿಸಲಾಗುತ್ತಿದೆ ಎಂದು ಸಚಿವರು ತಮ್ಮ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

2014 ರಿಂದ 2015 ರ ಜೂನ್ 30 ರವರೆಗೆ ಬೆಂಗಳೂರು ನಗರದಲ್ಲಿ ನಡೆದಿರುವ ಸರಗಳ್ಳತನ ಪ್ರಕರಣಗಳಲ್ಲಿ ಒಟ್ಟು 714 ಪ್ರಕರಣಗಳನ್ನು ದಾಖಲಿಸಿ 534 ಆರೋಪಿಗಳನ್ನು ದಸ್ತಗಿರಿ ಮಾಡಲಾಗಿದೆ. ಪದೇ ಪದೇ ಭಾಗಿಯಾಗುವವರ ವಿರೋಧ ಗೂಂಡಾ ಕಾಯ್ದೆ ಜಾರಿಗೊಳಿಸಲು ದಾಖಲೆ ಮತ್ತು ಮಾಹಿತಿಗಳನ್ನು ಕಲೆಹಾಕಲಾಗುತ್ತಿದೆ. ಬೆಂಗಳೂರು ನಗರದಲ್ಲಿ ಪ್ರಥಮ ಬಾರಿಗೆ ಹೆಚ್ಚುವರಿ ಪೊಲೀಸ್ ಆಯುಕ್ತರಿಗೆ ದಂಡಾಧಿಕಾರಿಗಳ ಅಧಿಕಾರವನ್ನು ನೀಡಲಾಗಿದೆ. ಇದರಿಂದ ಭದ್ರತಾ ಕಾಯ್ದೆಯಡಿ ಹೆಚ್ಚಿನ ಪ್ರಕರಣಗಳು ದಾಖಲಾಗುತ್ತಿದೆ.

ಬಾಬು:ಜಿಪಿಆರ್.

# ಲೋಕಾಯುಕ್ತದಲ್ಲಿ ಕಳೆದ ಮೂರು ವರ್ಷದಲ್ಲಿ 14,082 ಪ್ರಕರಣ ದಾಖಲು

ಬೆಂಗಳೂರು, ಜುಲೈ 14 (ಕರ್ನಾಟಕ ವಾರ್ತೆ)

ಕಳೆದ ಮೂರು ವರ್ಷಗಳಿಂದ ಲೋಕಾಯುಕ್ತದಲ್ಲಿ ಹೊಸದಾಗಿ 14,082 ಪ್ರಕರಣಗಳು ದಾಖಲಾಗಿವೆ. ಈ ಮೂರು ವರ್ಷಗಳ ಅವಧಿಯಲ್ಲಿ ಹಳೆಯ ಪ್ರಕರಣಗಳು ಸೇರಿದಂತೆ ಒಟ್ಟಾರೆ 23,066 ಪ್ರಕರಣಗಳು ಮುಕ್ತಾಯವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸಭೆಯಲ್ಲಿ ಇಂದು ಖಾನಾಪುರ ಶಾಸಕ ಅರವಿಂದ್ ಚಂದ್ರಕಾಂತ್ ಪಾಟೀಲ್ ಅವರ ಪ್ರಶ್ನೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಹತ್ತು ವರ್ಷ ಮತ್ತು ಅದಕ್ಕಿಂತ ಹೆಚ್ಚು ಅವಧಿಯ 96 ಪ್ರಕರಣಗಳು ಬಾಕಿಯಿದ್ದು ಅವುಗಳಲ್ಲಿ 3 ಪ್ರಕರಣಗಳು 2001 ರಿಂದ ಬಾಕಿ ಇರುತ್ತವೆ. ಆಪಾದಿತರು ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುವುದರಿಂದ ತನಿಖೆಯಲ್ಲಿ ಇರುವ ಪ್ರಕರಣಗಳಲ್ಲಿ ದಾಖಲಾತಿಗಳನ್ನು ಸಂಗ್ರಹಿಸುವುದು ಶೆಡ್ಯೂಲ್‍ಗಳು, ಬ್ಯಾಂಕಿನಿಂದ ಮಾಹಿತಿಗಳು, ಐ.ಟಿ. ವರದಿಗಳು, ಕೌಟುಂಬಿಕ ವೆಚ್ಚ, ಕಟ್ಟಡಗಳ ಮೌಲ್ಯಮಾಪನ ವರದಿಗಳು ಬರಬೇಕಾಗಿರುವುದು ಹಾಗೂ ಹಲವು ಪ್ರಕರಣಗಳಲ್ಲಿ ಅಭಿಯೋಜನಾ ಮಂಜೂರಾತಿ ಬರಬೇಕಾಗಿರುವುದರಿಂದ ಪ್ರಕರಣಗಳು ತನಿಖೆಯಲ್ಲಿ ಬಾಕಿ ಇವೆ. ಆದರೂ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ನಿಯಮಾನುಸಾರ ಶೀಘ್ರಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಮುಖ್ಯಮಂತ್ರಿಗಳು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಅರವಿಂದ್ ಚಂದ್ರಕಾಂತ್ ಪಾಟೀಲ್ ಅವರ ಮತ್ತೊಂದು ಪ್ರಶ್ನೆಗೆ ಮುಖ್ಯಮಂತ್ರಿಗಳು ಲಿಖಿತ ಉತ್ತರ ನೀಡಿ ಲೋಕಾಯುಕ್ತಕ್ಕೆ ಸರ್ಕಾರ ಪರಮಾಧಿಕಾರಿ ನೀಡಬೇಕು ಎಂಬ ಬೇಡಿಕೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಲೋಕಾಪಾಲ ಮಸೂದೆಯನ್ನು ಆಧರಿಸಿ ಲೋಕಾಯುಕ್ತ ಸಂಸ್ಥೆಯನ್ನು ಬಲಪಡಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ತಿಳಿಸಿದ್ದಾರೆ.

ಶಾಸಕ ನಾರಾಯಣಸ್ವಾಮಿ ಎಸ್.ಎನ್. ಅವರ ಮತ್ತೊಂದು ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಮುಖ್ಯಮಂತ್ರಿಗಳು 2011 ರ ಸೆಪ್ಟೆಂಬರ್ 26 ರ ಸುತ್ತೋಲೆಯನ್ವಯ ಸರ್ಕಾರಿ ನೌಕರರ ವಿರೋಧ ನ್ಯಾಯಾಲಯದಲ್ಲಿ ಕಾನೂನು ಕ್ರಮ ಜರುಗಿಸಲು ಅಭಿಯೋಜನಾ ಮಂಜೂರಾತಿ ಆದೇಶವನ್ನು 3 ತಿಂಗಳ ಕಾಲಮಿತಿಯಲ್ಲಿ ನೀಡಲು ಕಟ್ಟುನಿಟ್ಟಾಗಿ ಕ್ರಮ ಕೈಗೊಳ್ಳಬೇಕೆಂದು ಅಧಿಕಾರ ಹೊಂದಿರುವ ಪ್ರಾಧಿಕಾರಗಳಿಗೆ ಸೂಚಿಸಲಾಗಿದೆ. ಅದರಂತೆ ಲೋಕಾಯುಕ್ತದಿಂದ ಅಭಿಯೋಜನಾ ಮಂಜೂರಾತಿ ಕೋರಿ ಬಂದ ಪ್ರಕರಣಗಳನ್ನು ದಾಖಲೆಗಳ ಪರಿಶೀಲನೆಯೊಂದಿಗೆ ನಿಯಮಾನುಸಾರವಾಗಿ ಪರಿಶೀಲಿಸಿ ವಿಳಂಬಕ್ಕೆ ಆಸ್ಪದನೀಡದೇ ಆದ್ಯತೆ ಮೇರೆಗೆ ಶೀಘ್ರವಾಗಿ ಮಂಜೂರಾತಿ ನೀಡಲಾಗುತ್ತಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ.
ಬಾಬು:ಜಿಪಿಆರ್.

# ವೈಜನಾಥ್ ಪಾಟೀಲ್ ಅವರ ಬಿಡುಗಡೆಗೆ ಆದೇಶ

:- ಜಾರ್ಜ್, ಗೃಹ ಸಚಿವರು

**ಬೆಂಗಳೂರು, ಜುಲೈ 14 (ಕರ್ನಾಟಕ ವಾರ್ತೆ)**

ಇಂದು ಬೆಳಿಗ್ಗೆ ಮುಂಜಾಗ್ರತಾ ಕ್ರಮವಾಗಿ ಬಂಧಿಸಲಾಗಿದ್ದ ವೈಜನಾಥ್ ಪಾಟೀಲ್ ಅವರನ್ನು ಈ ಕೂಡಲೇ ಬಿಡುಗಡೆ ಮಾಡುವಂತೆ ಆದೇಶಿಸಲಾಗಿದೆ ಎಂದು ಗೃಹ ಸಚಿವ ಕೆ.ಜೆ. ಜಾರ್ಜ್ ಅವರು ವಿಧಾನಸಭೆಯಲ್ಲಿಂದು ತಿಳಿಸಿದರು.

ಫ್ರೀಡಂ ಪಾರ್ಕ್‌ನಲ್ಲಿ ಆರ್ಟಿಕಲ್ 371ಜೆ ಯಲ್ಲಿ ಕೆಲವು ದೋಷಗಳಿದ್ದು, ಅವುಗಳನ್ನು ಸರಿಪಡಿಸಿದ ನಂತರವೇ ಅನುಷ್ಠಾನಗೊಳಿಸಬೇಕೆಂದು ಹೋರಾಟದಲ್ಲಿ ನಿರತರಾಗಿದ್ದ ಪಾಟೀಲ್ ಅವರು ರಾಜ್ಯಪಾಲರಿಂದ ಅನುಮತಿ ಪಡೆಯದೇ ಅವರ ಭೇಟಿಗಾಗಿ ರಾಜಭವನಕ್ಕೆ ಹೊರಟಿದ್ದ ಕಾರಣದಿಂದಾಗಿ ಮುಂಜಾಗ್ರತಾ ಕ್ರಮವಾಗಿ ಪೊಲೀಸರು ಅವರನ್ನು ಬಂಧಿಸಿದ್ದಾರೆಂದು ಸಚಿವರು ಹೇಳಿದರು.

ಪೊಲೀಸರು ಅವರ ಮೇಲೆ ಯಾವುದೇ ಕೇಸನ್ನು ದಾಖಲು ಮಾಡಿರುವುದಿಲ್ಲ. ಹಿರಿಯ ಮುತ್ಸದ್ದಿಯಾದ ಅವರನ್ನು ಗೌರವಯುತವಾಗಿಯೇ ನಡೆಸಿಕೊಳ್ಳಲಾಗಿದೆಯಲ್ಲದೆ, ಈ ಕೂಡಲೇ ಬಿಡುಗಡೆ ಮಾಡುವಂತೆ ತಾವು ಆದೇಶ ನೀಡಿರುವುದಾಗಿ ಸದನಕ್ಕೆ ಸ್ಪಷ್ಟಪಡಿಸಿದರು.

ಶಾಂತಿಯುತವಾಗಿಯೇ ಹೋರಾಟ ನಡೆಸುತಿದ್ದ ಹಿರಿಯ ಮುತ್ಸದ್ದಿ ಹಾಗೂ ಹೋರಾಟಗಾರರಾದ ವೈಜುನಾಥ್ ಪಾಟೀಲ್ ಅವರನ್ನು ಪೊಲೀಸರು ಬಂಧಿಸಿರುವುದು ಸರಿಯಾದ ಕ್ರಮವಲ್ಲ, ಕೂಡಲೇ ಅವರನ್ನು ಬಿಡುಗಡೆ ಮಾಡಬೇಕೆಂದು ಭಾರತೀಯ ಜನತಾ ಪಕ್ಷದ ಶಾಸಕರು ಸದನದ ಬಾವಿಗಿಳಿದು ಪ್ರತಿಭಟನೆ ನಡೆಸಿದ ಹಿನ್ನೆಲೆಯಲ್ಲಿ ಗೃಹ ಸಚಿವರು ಸ್ಪಷ್ಟನೆ ನೀಡಿದರು.

ಪಲ್ಲವಿ/ಪೂರ್ಣಿಮ

# ಕೈಗಾರಿಕೆಗಳಿಂದ 2707165 ಕೋಟಿ ಬಂಡವಾಳ ಹೂಡಿಕೆ

**ಬೆಂಗಳೂರು, ಜುಲೈ 14 (ಕರ್ನಾಟಕ ವಾರ್ತೆ)**

ಮೂರು ವರ್ಷಗಳಿಂದ ರಾಜ್ಯದಲ್ಲಿ ಒಡಂಬಡಿಕೆ ಮಾಡಿಕೊಳ್ಳಲಾಗಿರುವ ಕೈಗಾರಿಕೆಗಳಿಂದ **27,07165** ಕೋಟಿ ಬಂಡವಾಳ ಹೂಡಿಕೆಯಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನ ಸಭೆಯಲ್ಲಿಂದು ತಿಳಿಸಿದರು.

ವಿಧಾನ ಸಭೆ ಸದಸ್ಯ ನಾರಾಯಣಸ್ವಾಮಿ ಅವರು ಕೇಳಿರುವ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಮುಖ್ಯಮಂತ್ರಿಯವರು ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ **245** ಭಾರಿ ಮತ್ತು ಮಧ್ಯಮ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಒಡಂಬಡಿಕೆ ಮಾಡಿಕೊಳ್ಳಲಾಗಿದ್ದು, ಈ ಉದ್ದಿಮೆಗಳಿಂದ ಅಂದಾಜು **29556** ಜನರಿಗೆ ಉದ್ಯೋಗಾವಕಾಶ ಸೃಷ್ಟಿಯಾಗಿದೆ ಎಂದು ಮಾಹಿತಿ ನೀಡಿದರು.

ಈ ಖಾಸಗಿ ಕೈಗಾರಿಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಮೀಸಲಾತಿ ನಿಯಮ ಅನ್ವಯವಾಗದ ಕಾರಣ ನಮ್ಮ ರಾಜ್ಯದವರಿಗೆ ನೇಮಕಾತಿಯಲ್ಲಿ ಆದ್ಯತೆ ನೀಡಲಾಗುವುದೆಂದು ಮುಖ್ಯಮಂತ್ರಿ ಅವರು ತಿಳಿಸಿದ್ದಾರೆ.

ಪಲ್ಲವಿ/ ಪೂರ್ಣಿಮ

# ಅವಧಿ ವಿಸ್ತರಣೆ

ಬೆಂಗಳೂರು, ಜುಲೈ 14 (ಕರ್ನಾಟಕ ವಾರ್ತೆ)

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಾಹಿತ್ಯ ಸಂಸ್ಕೃತಿ ಮತ್ತು ಕಲೆಯ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಘ-ಸಂಸ್ಥೆಗಳು, ಚಿತ್ರಕಲಾವಿದರು ಮತ್ತು ಶಿಲ್ಪಿಗಳ ಪ್ರದರ್ಶನಕ್ಕೆ ಧನಸಹಾಯಕ್ಕಾಗಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು.

ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ 15-7-2015 ಆಗಿತ್ತು. ಅದನ್ನು ವಿಸ್ತರಿಸಿ ದಿನಾಂಕ 31-07-2015 ರವರೆಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ವಿವರಗಳಿಗೆ ಮತ್ತು ಅರ್ಜಿ ಸಲ್ಲಿಸಲು www.kannadasiri.co.in ಅನ್ನು ಸಂಪರ್ಕಿಸಬಹುದು.

ಬಾಬು:ಜಿಪಿಆರ್

# ಅವಧಿ ವಿಸ್ತರಣೆ

ಬೆಂಗಳೂರು, ಜುಲೈ 14 (ಕರ್ನಾಟಕ ವಾರ್ತೆ)

ಅಲ್ಪಸಂಖ್ಯಾತರ ನಿರ್ದೇಶನಾಲಯದ ವತಿಯಿಂದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ದರು, ಸಿಖ್ ಮತ್ತು ಪಾರ್ಸಿ ಸಮುದಾಯಗಳ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಕ್ಕೆ 1 ರಿಂದ 8 ನೇ ತರಗತಿಯ ವಿದ್ಯಾರ್ಥಿಗಳು ಶಾಲೆಗೆ ಅರ್ಜಿ ಸಲ್ಲಿಸಲು -ಕೊನೆಯ ದಿನಾಂಕ 14-08-2015 ಹಾಗೂ 9 ಮತ್ತು 10 ನೇ ತರಗತಿಯ ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು - ಕೊನೆಯ ದಿನಾಂಕ 31-08-2015 ರವರೆಗೆ ವಿಸ್ತರಿಸಿದೆ. ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ ವಿಳಾಸ www.gokdom.kar.nic.in ಸಂಪರ್ಕಿಸಲು ಕೋರಿದೆ.

ಬಾಬು:ಜಿಪಿಆರ್

# ಇನ್ನೂ ಪ್ರತಿ ಶನಿವಾರ 'ಬೆಳ್ಳಿ ಸಿನಿಮಾ- ಬೆಳ್ಳಿ ಮಾತು"

ಬೆಂಗಳೂರು, ಜುಲೈ 14(ಕರ್ನಾಟಕ ವಾರ್ತೆ)

ಕನ್ನಡ ಚಿತ್ರರಂಗಕ್ಕೆ ಹೊಸ ಹೊಳಪು ನೀಡಲು ರಾಜ್ಯ ಸರ್ಕಾರ ಸ್ಥಾಪಿಸಿರುವ ಕರ್ನಾಟಕ ಚಲನಚಿತ್ರ ಅಕಾಡೆಮಿಯು ಪ್ರತಿ ಶನಿವಾರ **–"ಬೆಳ್ಳಿ ಸಿನಿಮಾ– ಬೆಳ್ಳಿ ಮಾತು"** ಎಂಬ ಹೊಸ ಕಾರ್ಯಕ್ರಮವನ್ನು ಜುಲೈ 18 ರಿಂದ ಬೆಂಗಳೂರಿನಲ್ಲಿ ನಡೆಸಲಾಗುವುದು ಎಂದು ರಿಜಿಸ್ಟ್ರಾರ್ ಶ್ರೀ ಹೆಚ್.ಬಿ.ದಿನೇಶ್ ತಿಳಿಸಿದ್ದಾರೆ.

ಕನ್ನಡ ಪ್ರಶಸ್ತಿ ಪುರಸ್ಕೃತ ಹಾಗೂ ಸದಭಿರುಚಿಯ ಕನ್ನಡ ಚಿತ್ರಗಳನ್ನು ವಾರಕ್ಕೊಮ್ಮೆ ಅಂದರೆ ಪ್ರತಿ ಶನಿವಾರ ಪ್ರದರ್ಶಿಸಿ ಆ ಚಿತ್ರಕ್ಕೆ ಸಂಬಂಧಿಸಿದ ನಿರ್ದೇಶಕರು, ನಿರ್ಮಾಪಕರು, ಕಲಾವಿದರು ಹಾಗೂ ತಂತ್ರಜ್ಞರೊಡನೆ ಸಂವಾದಕ್ಕೆ ಅವಕಾಶ ಕಲ್ಪಿಸುವುದು ಈ ಯೋಜನೆಯ ಉದ್ದೇಶವಾಗಿದೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಯೋಗದಲ್ಲಿ ಪ್ರತಿ ವರ್ಷ ಅಂತರ ರಾಷ್ಟ್ರೀಯ ಚಲನ ಚಿತ್ರೋತ್ಸವವನ್ನು ಆಯೋಜಿಸುತ್ತಿರುವ ಕರ್ನಾಟಕ ಚಲನಚಿತ್ರ ಅಕಾಡೆಮಿಯು ಪ್ರತಿ ವಾರವು ಚಿತ್ರ ಪ್ರೇಮಿಗಳನ್ನು ಒಂದೆಡೆ ಕಲೆಹಾಕಿ ಪ್ರಬುದ್ಧ ಚಲನಚಿತ್ರ ಪ್ರೇಕ್ಷಕ ಹಾಗೂ ನಿರ್ಮಾಪಕರ ಹಂದರವನ್ನು ಕಟ್ಟಲು ಉದ್ದೇಶಿಸಿದೆ ಎಂದು ತಿಳಿಸಿದ್ದಾರೆ.

**"ಬೆಳ್ಳಿ ಸಿನಿಮಾ–ಬೆಳ್ಳಿ ಮಾತು"** ಮೊದಲ ಚಿತ್ರ ಪ್ರದರ್ಶನ ಜುಲೈ 18 ರಂದು ಶನಿವಾರ ಸಂಜೆ 4.00 ಗಂಟೆಗೆ ಬೆಂಗಳೂರಿನ ಮಿಲ್ಲರ್ಸ್ ರಸ್ತೆಯ ಚಾಮುಂಡೇಶ್ವರಿ ಚಿತ್ರಮಂದಿರದಲ್ಲಿ ಪ್ರದರ್ಶನಗೊಳ್ಳಲಿದೆ. ಸದಭಿರುಚಿಯ "ಹರಿವು" ಬೆಳ್ಳಿ ಸಿನಿಮಾದ ಮೊದಲ ಪ್ರದರ್ಶನ. ಚಿತ್ರದ ನಿರ್ದೇಶಕ ಶ್ರೀ ಎಂ. ಸೋಮಶೇಖರರೆಡ್ಡಿ (ಮನ್‌ಸೂರೆ) ಅವರು "ಬೆಳ್ಳಿ ಮಾತು" ಕಾರ್ಯಕ್ರಮದಲ್ಲಿ ಭಾಗವಹಿಸುವರು. ಚಿತ್ರ ವೀಕ್ಷಿಸಲು ಇಚ್ಚಿಸುವವರು ಕರ್ನಾಟಕ ಚಲನಚಿತ್ರ ಅಕಾಡೆಮಿಯ ಇ–ಮೇಲ್ ವಿಳಾಸ karnatakachalanachitraacademy@gmail.com ಅಥವಾ ದೂರವಾಣಿ ಸಂಖ್ಯೆ 080–22133410 ಮೂಲಕ ನೋಂದಾಯಿಸಿಕೊಳ್ಳಲು ಕೋರಿದೆ. ಪ್ರವೇಶ ಉಚಿತ. ಮೊದಲು ಬಂದವರಿಗೆ ಮೊದಲ ಆದ್ಯತೆ ಅವರು ತಿಳಿಸಿದ್ದಾರೆ.

ಬಾಬು/ಕೆಎಂ

## ಸಾರಿಗೆ ಅದಾಲತ್

**ಬೆಂಗಳೂರು, ಜುಲೈ 14 (ಕರ್ನಾಟಕ ವಾರ್ತೆ)**

**ನೆಲಮಂಗಲದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯಲ್ಲಿ ಜುಲೈ 20 ರಂದು ಮಧ್ಯಾಹ್ನ 3–00 ಗಂಟೆಗೆ ಸಾರಿಗೆ ಅದಾಲತ್‌ನ್ನು ಏರ್ಪಡಿಸಲಾಗಿದೆ.**

**ಈ ವ್ಯಾಪ್ತಿಯಲ್ಲಿನ ಸಾರ್ವಜನಿಕರು ಸಾರಿಗೆ ಇಲಾಖೆಗೆ ಸಂಬಂಧಿಸಿದ ಕುಂದುಕೊರತೆಗಳನ್ನು ಬಗೆಹರಿಸಿಕೊಳ್ಳಬಹುದಾಗಿದೆ.**

**ಜಿಪಿಆರ್.**

## ಪ್ರಥಮ ಎಂ.ಎಫ್.ಎ. ತರಗತಿಗಳ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

**ಬೆಂಗಳೂರು, ಜುಲೈ 14 (ಕರ್ನಾಟಕ ವಾರ್ತೆ)**

ಮೈಸೂರಿನ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲೆ ಕಾಲೇಜಿನಲ್ಲಿ 2015–16ನೇ ಸಾಲಿನ ಪ್ರಥಮ ಎಂ.ಎಫ್.ಎ. ತರಗತಿಗಳ ಚಿತ್ರಕಲೆ , ಶಿಲ್ಪಕಲೆ ಹಾಗೂ ಗ್ರಾಫಿಕ್ಸ್ ವಿಭಾಗಗಳ ಪ್ರವೇಶಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಿದೆ.

ಹೆಚ್ಚಿನ ಮಾಹಿತಿಗಾಗಿ "ಡೀನ್ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲೆ ಕಾಲೇಜು" (ಕಾವಾ) ಭಾರತ ಸರ್ಕಾರ ಪಠ್ಯಪುಸ್ತಕ ಮುದ್ರಾಣಾಲಯದ ಆವರಣ, ಟಿ.ಎನ್. ಪುರ ರಸ್ತೆ, ಮೈಸೂರು – 570 011 ಈ ವಿಳಾಸಕ್ಕೆ ಕಳುಹಿಸಿ ಪಡೆಯಬಹುದಾಗಿದೆ.

ಜಿಪಿಆರ್.

## ಮೂರು ದಿನಗಳ ಉಚಿತ ಕೂಚುಪೂಡಿ ನೃತ್ಯ ಶಿಬಿರ

ಬೆಂಗಳೂರು, ಜುಲೈ 14 (ಕರ್ನಾಟಕ ವಾರ್ತೆ)

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು ಬೆಂಗಳೂರಿನ ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರ, ದಕ್ಷಿಣ ಪ್ರಾಂತೀಯ ಕೇಂದ್ರ, ನಾಗರಭಾವಿ, ಬೆಂಗಳೂರು ಇಲ್ಲಿ ಜುಲೈ 31 ರಿಂದ ಆಗಸ್ಟ್ 2 ರವರೆಗೆ ಆಂಧ್ರದ ಕೂಚುಪೂಡಿ ಗ್ರಾಮದಿಂದ ಆಗಮಿಸಿರುವ ನುರಿತ ತಜ್ಞರಿಂದ ಮೂರು ದಿನಗಳ ಉಚಿತ ಕೂಚುಪೂಡಿ ನೃತ್ಯ ಶಿಬಿವರನ್ನು ಹಮ್ಮಿಕೊಂಡಿದೆ.

ಎರಡು ಹಂತಗಳಲ್ಲಿ ನಡೆಯುವ ಈ ಶಿಬಿರದಲ್ಲಿ 10 ರಿಂದ 15 ವಯೋಮಾನದವರಿಗೆ ಪ್ರಾರಂಭಿಕ ಹಂತದಲ್ಲಿ, ಜೂನಿಯರ್ ಪರೀಕ್ಷೆ ಪಾಸಾದ 15 ವರ್ಷ ಮೇಲ್ಪಟ್ಟವರಿಗೆ ಅಥವಾ ಕನಿಷ್ಠ ಐದು ವರ್ಷ ಕೂಚುಪುಡಿ ಕಲಿತವರಿಗೆ ಉನ್ನತ ಹಂತದ ತರಬೇತಿ ನೀಡಲಾಗುವುದು. (ಗುರುಗಳ ಪ್ರಮಾಣ ಪತ್ರ ಹೊಂದಿರಬೇಕು) 20 ಮಂದಿ ಸ್ಥಳೀಯರು, 20 ಮಂದಿ ರಾಜ್ಯದ ಇತರೆ ಸ್ಥಳಗಳ ಅಭ್ಯರ್ಥಿಗಳು ಸೇರಿ ಒಟ್ಟು 40 ಮಂದಿ ಶಿಬಿರಾರ್ಥಿಗಳಿಗೆ ಆದ್ಯತೆ ಮೇರೆಗೆ ಪ್ರವೇಶಾವಕಾಶ.

ಆಸಕ್ತರು ಬಿಳಿಯ ಹಾಳೆಯಲ್ಲಿ ಸ್ವವಿವರದೊಂದಿಗೆ ಹೆಸರು, ವಿಳಾಸ, ದೂರವಾಣಿ/ಮೊಬೈಲ್, ಜನ್ಮ ದಿನಾಂಕ (ಜನನ ಪ್ರಮಾಣ ಪತ್ರ) ಹಾಗೂ ಮೇಲ್ಕಂಡ ಕಲಾ ದಾಖಲೆಯೊಂದಿಗೆ, ಜುಲೈ 20 ರೊಳಗೆ ರಿಜಿಸ್ಟ್ರಾರ್, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಕನ್ನಡ ಭವನ, 2ನೇಮಹಡಿ, ಜೆ.ಸಿ.ರಸ್ತೆ, ಬೆಂಗಳೂರು –2 ಇಲ್ಲಿಗೆ ಕಳುಹಿಸಿಕೊಡಬೇಕು.

ಜಿಪಿಆರ್.

## ಫೆಲೋಶಿಪ್‌ಗಾಗಿ ಅರ್ಜಿ ಆಹ್ವಾನ

ಬೆಂಗಳೂರು, ಜುಲೈ 14 (ಕರ್ನಾಟಕ ವಾರ್ತೆ)

ಕರ್ನಾಟಕ ಸಾಹಿತ್ಯ ಅಕಾಡೆಮಿಯು 2015–16 ನೇ ಸಾಲಿಗೆ ವಿವಿಧ ಯೋಜನಗಳಡಿಯಲ್ಲಿ ಫೆಲೋಶಿಪ್‌ಗಾಗಿ ಅರ್ಜಿಯನ್ನು ಆಹ್ವಾನಿಸಿದೆ.

ಅರ್ಜಿಯ ನಮೂನೆ ಹಾಗೂ ಉಳಿದ ವಿವರಗಳನ್ನು ಸಾಹಿತ್ಯ ಅಕಾಡೆಮಿಯ ವೆಬ್‌ಸೈಟ್ **www.karnatakasahithyaacademy.org** ನಲ್ಲಿ ಅಳವಡಿಸಲಾಗಿದೆ. ಆಸಕ್ತ ಅರ್ಹ ಅಭ್ಯರ್ಥಿಗಳು ವೆಬ್‌ಸೈಟ್‌ನಿಂದ ಅರ್ಜಿ ನಮೂನೆಯನ್ನು ಪಡೆದುಕೊಳ್ಳಬಹುದಾಗಿದೆ.

ಜಿಪಿಆರ್.

# ಇಲಾಖಾ ಪರೀಕ್ಷೆ ಫಲಿತಾಂಶ ವೆಬ್‌ಸೈಟ್‌ನಲ್ಲಿ ಪ್ರಕಟ

## ದ್ವಿತೀಯ ಅಧಿವೇಶನದ ಪರೀಕ್ಷೆಗೆ ಅರ್ಜಿ ಆಹ್ವಾನ

ಬೆಂಗಳೂರು, ಜುಲೈ 14 (ಕರ್ನಾಟಕ ವಾರ್ತೆ)

2015 ನೇ ಸಾಲಿನಲ್ಲಿ ಕರ್ನಾಟಕ ಲೋಕಸೇವಾ ಆಯೋಗವು ನಡೆಸಿದ ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷೆಗಳ ಫಲಿತಾಂಶವನ್ನು ಜುಲೈ 7 ರಂದು ಪ್ರಕಟಿಸಲಾಗಿದ್ದು, ಅಭ್ಯರ್ಥಿಗಳು ಸದರಿ ಫಲಿತಾಂಶವನ್ನು ಆಯೋಗದ ವೆಬ್‌ಸೈಟ್ "http://kpsc.kar.nic.in" ನಲ್ಲಿ ವೀಕ್ಷಿಸಬಹುದಾಗಿದೆ.

ಪ್ರಸಕ್ತ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳಿಗೆ ಅರ್ಹ ಸರ್ಕಾರಿ ನೌಕರರು ಆನ್‌ಲೈನ್ ಮೂಲಕ ಆಗಸ್ಟ್ 6 ರೊಳಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

ಹೆಚ್ಚಿನ ವಿವರಗಳಿಗಾಗಿ ಮೇಲೆ ತಿಳಿಸಿರುವ ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಅಧಿಸೂಚನೆಯನ್ನು ನೋಡಬಹುದಾಗಿದೆ ಹಾಗೂ ಕರ್ನಾಟಕ ಲೋಕಸೇವಾ ಆಯೋಗದ ದೂರವಾಣಿ 080 – 30574944/30574945/30574957 ಸಂಪರ್ಕಿಸುವಂತೆ ಅಧಿಕೃತ ಪ್ರಕಟಣೆ ತಿಳಿಸಿದೆ.

ಜಿಪಿಆರ್.

# ಬೆಂಗಳೂರು ಉತ್ತರ ವಲಯದ ಅನಧಿಕೃತ ಶಾಲೆ

ಬೆಂಗಳೂರು, ಜುಲೈ 14 (ಕರ್ನಾಟಕ ವಾರ್ತೆ)

ಬೆಂಗಳೂರು ಉತ್ತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ವ್ಯಾಪ್ತಿಗೆ ಬರುವ ಈ ಕೆಳಕಂಡ ಅನಧಿಕೃತ ಶಾಲೆಗಳ ವಿವರ ಇಂತಿದೆ. ಪೋಷಕರು ತಮ್ಮ ಮಕ್ಕಳನ್ನು ಈ ಕೆಳಕಂಡ ಶಾಲೆಗಳಲ್ಲಿ ಕೆಳಕಂಡ ತರಗತಿಗೆ ದಾಖಲಾತಿ ಮಾಡದಂತೆ ಸೂಚಿಸಿದೆ.

ಪೂರ್ವ ಪ್ರಾಥಮಿಕ ಶಾಲೆಗಳಾದ ಎಸ್.ಆರ್. ಕೆ. ಇಂಡಿಯನ್ ಪೂರ್ವ ಪ್ರಾಥಮಿಕ ಶಾಲೆ, ಕೋಡಿಗೆಹಳ್ಳಿ, ಬೆಂಗಳೂರು, ಜ್ಞಾನಗಂಗಾ ಪೂರ್ವ ಪ್ರಾಥಮಿಕ ಶಾಲೆ, ದೊಡ್ಡಬ್ಯಾಲಕೆರೆ, ಬೆಂಗಳೂರು ಹಾಗೂ ನ್ಯೂ ಸನ್ ಬ್ರೈಟ್ ಶಾಲೆ, ರಷಾದ್ ನಗರ, ಬೆಂಗಳೂರು.

6 ರಿಂದ 8 ನೇ ತರಗತಿವರೆಗಿನ ಶಾಲೆಗಳಾದ ಇನ್ಸೈಟ್ ಸೂಕ್ಲ್, ಸಿದೇದಹಳ್ಳಿ, ಬೆಂಗಳೂರು, ಸೆಂಟ್ ಮಾರ್ಥಾಸ್ ಶಾಲೆ, ಹ್ಯಾರೋಕ್ಯಾತನಹಳ್ಳಿ, ಬೆಂಗಳೂರು, ಲಿಟಿಲ್ ಏಂಜಲ್ ಶಾಲೆ, ಚಿಕ್ಕಬಾಣಾವಾರ, ಬೆಂಗಳೂರು, ವಿದ್ವತ್ ಶಾಲೆ, ಅಗ್ರಹಾರ ಬಡಾವಣೆ, ಬೆಂಗಳೂರು, ಚೈತನ್ಯ ವಿದ್ಯಾಲಯ, ಪಾಲನಹಳ್ಳಿ, ಬೆಂಗಳೂರು, ನಾರಾಯಣ ಇ ಟೆಕ್ನೋ ಸ್ಕೂಲ್ ತಿಂಡ್ಲು, ವಿದ್ಯಾರಣ್ಯಪುರ, ಬೆಂಗಳೂರು. ನಾರಾಯಣ ಇ ಟೆಕ್ನೋ ಸ್ಕೂಲ್ ಯಲಹಂಕ, ಬೆಂಗಳೂರು. ವಿ.ಎಸ್. ಪಬ್ಲಿಕ್ ಸ್ಕೂಲ್ ಭದ್ರಪ್ಪ ಬಡಾವಣೆ, ಬೆಂಗಳೂರು, ನೇಷನ್ ಬಿಲ್ಡರ್ಸ್, ಸ್ಕೂಲ್, ಶಿರುಮೇನಹಳ್ಳಿ ಅಗ್ರಹಾರ ಬಡಾವಣೆ, ಸೆಕ್ರೆಡ್ ಹಾರ್ಟ್ ಸ್ಕೂಲ್, ಶಿಲುವಪುರ, ಬೆಂಗಳೂರು, ಬ್ರೈಟ್ ಸ್ಕೂಲ್, ದೊಡ್ಡಬ್ಯಾಲಕೆರೆ, ಬೆಂಗಳೂರು, ಫಾತಿಮಾ ಸ್ಕೂಲ್, ನಾಗವಾರ, ಬೆಂಗಳೂರು, ಮೌಂಟ್ ಲಿಟೆರ ಝಿ ಸ್ಕೂಲ್, ರಾಮಚಂದ್ರಪುರ, ಬೆಂಗಳೂರು ಹಾಗೂ ಕ್ರೇಸಾಲಿಸ್ ಶಾಲೆ, ಯಲಹಂಕ ಉಪ ನಗರ.

ಸಿ.ಬಿ.ಎಸ್.ಇ/ಐ.ಸಿ.ಎ.ಇ. ಶಾಲೆಗಳಾದ ನಾರಾಯಣ ಇ ಟೆಕ್ನೋ ಸ್ಕೂಲ್, ಸಹಕಾರ ನಗರ, ಬೆಂಗಳೂರು. ನಾರಾಯಣ ಇಲಾಂಪಿಯಾಡ್ ಸ್ಕೂಲ್, ತಿಂಡ್ಲು ಮುಖ್ಯರಸ್ತೆ, ಬೆಂಗಳೂರು, ನಾರಾಯಣ ಇ ಟೆಕ್ನೋ ಸ್ಕೂಲ್, ಯಲಹಂಕ, ಚೈತನ್ಯ ಟೆಕ್ನೋ ಸ್ಕೂಲ್, ಯಲಹಂಕ ಉಪನಗರ, ವಿಬ್‌ಗಯಾರ್ ಸ್ಕೂಲ್, ಜಕ್ಕೂರು ಬಡಾವಣೆ, ಮೌಂಟ್ ಲಿಚರಾ ಝೀ ಸ್ಕೂಲ್, ರಾಮಚಂದ್ರಪುರ, ಬೆಂಗಳೂರು ಹಾಗೂ ಪ್ರೆಸಿಡೆನ್ಸಿ

ಸ್ಕೂಲ್, ಆವಲಹಳ್ಳಿ, ಬೆಂಗಳೂರು ಈ ಎಲ್ಲಾ ಶಾಲೆಗಳು ಅನಧಿಕೃತ ಶಾಲೆಗಳಾಗಿರುತ್ತವೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.
ಜಿಪಿಆರ್.

# ಮನೆಯಂಗಳದಲ್ಲಿ ಮಾತುಕತೆ ತಿಂಗಳ ಅತಿಥಿಯಾಗಿ ನಾಡೋಜ ಸಿದ್ದಲಿಂಗಯ್ಯ

ಬೆಂಗಳೂರು, ಜುಲೈ 14 (ಕರ್ನಾಟಕ ವಾರ್ತೆ)

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಲಯವು ಜುಲೈ 17 ರಂದು ಸಂಜೆ 4-00 ಗಂಟೆಗೆ ಕನ್ನಡ ಭವನದ ನಯನ ಸಭಾಂಗಣದಲ್ಲಿ ಹಮ್ಮಿಕೊಂಡಿರುವ "ಮನೆಯಂಗಳದಲ್ಲಿ ಮಾತುಕತೆ" ಕಾರ್ಯಕ್ರಮದಲ್ಲಿ ಕವಿ, ಚಿಂತಕ ನಾಡೋಜ ಸಿದ್ದಲಿಂಗಯ್ಯ ಅವರು ತಿಂಗಳ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಬಿ.ಜಿ. ನಂದಕುಮಾರ್ ಅವರು ಅತಿಥಿಗಳಿಗೆ ಗೌರವ ಸಮರ್ಪಣೆ ಸಲ್ಲಿಸುವರು.

ಅಂದು ಮಧ್ಯಾಹ್ನ 3.00 ರಿಂದ 4.00 ಗಂಟೆವರೆಗೆ ಕೋಲಾರದ ದೊಡ್ಡಮ್ಮಳೆ ರವಿ ಅವರಿಂದ ಹೋರಾಟದ ಗೀತೆಗಳ ಗಾಯನವನ್ನು ಹಮ್ಮಿಕೊಳ್ಳಲಾಗಿದೆ.
ಜಿಪಿಆರ್.